ದಿನಾಂಕಃ 22-10-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ.ಎಸ್.ಡಿ. ವಕೀಲರಿಂದಃ ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಮತ್ತು ನನಗೆ ಗೊತ್ತಿವೆ. ಮಲ್ಲಯ್ಯ ತಂದೆ ರಂಗಯ್ಯನ ಹೆಸರಿಗೆ ಹಿರೇರಾಯಕುಂಪ್ಪಿ ಗ್ರಾಮದ ಸರ್ವೇ ನಂ.90/1 ರಲ್ಲಿ 11 ಎಕರೆ 25 ಗುಂಟೆ ಜಮೀನು ಇತ್ತು. ಸದರಿ ಮಲ್ಲಯ್ಯ ತಂದೆ ರಂಗಯ್ಯನಿಗೆ ಸದರಿ ಆಸ್ತಿ ಆತನ ತಂದೆ ರಂಗಯ್ಯನ ಬಳಿಯಿಂದ ಪಿತ್ರಾರ್ಜಿತವಾಗಿ ಬಂದಿತ್ತು. ಸದರಿ ರಂಗಯ್ಯನ ತಂದೆಯ ಹೆಸರು ಏನು ಎಂದು ನನಗೆ ಗೊತ್ತಿಲ್ಲ. ಸದರಿ ರಂಗಯ್ಯನಿಗೆ ಸದರಿ ಆಸ್ತಿ ಆತನ ತಂದೆಯ ಬಳಿಯಿಂದ ಬಂದಿದೆ ಆದರೇ ನನಗೆ ಸದರಿ ರಂಗಯ್ಯನ ತಂದೆಯ ಹೆಸರು ಗೊತ್ತಿಲ್ಲ. ಸದರಿ ರಂಗಯ್ಯನನ್ನು ನಾನು ನೋಡಿರುವುದಿಲ್ಲ ಮತ್ತು ಆತ ಮರಣ ಹೊಂದಿ ಏಷ್ಟು ವರ್ಷ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ರಂಗಯ್ಯನಿಗೆ ಒಬ್ಬನೆ ಮಗ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ರಂಗಯ್ಯನಿಗೆ ಇಬ್ಬರು ಮಕ್ಕಳು ಅವರೆಂದರೆ ಮಲ್ಲಯ್ಯ ಮತ್ತು ಹನುಮಪ್ಪ. ಸದರಿ ರಂಗಯ್ಯನ ಮರಣ ನಂತರ ಸದರಿ ಆಸ್ತಿ ಕೇವಲ ಮಲಯ್ಯನ ಹೆಸರಿಗೆ ಮಾತ್ರ ಆಯಿತು. ಸದರಿ ಮಲಯ್ಯ ಮತ್ತು ಸದರಿ ಹನುಮಪ್ಪ ರವರಿಗೆ ತಲಾ 11 ಎಕರೆ 25 ಗುಂಟೆ ಜಮೀನುಗಳು ಸದರಿ ರಂಗಯ್ಯನ ಮರಣದ ನಂತರ ಬಂದಿವೆ. ಸದರಿ ಮಲಯ್ಯ ಮತ್ತು ಹನುಮಪ್ಪ ರವರ ತಂದೆಯಾದ ರಂಗಯ್ಯನ ಹೆಸರಿಗೆ ಒಟ್ಟು 23 ಎಕರೆ 10 ಗುಂಟೆ ಜಮಿನು ಇತ್ತು. ಸದರಿ ರಂಗಯ್ಯನ ಹೆಸರಿಗೆ ಒಟ್ಟು 23 ಎಕರೆ 10 ಗುಂಟೆ ಜಮಿನು ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು

ಮಾಡಿರುವುದಿಲ್ಲ. ಸದರಿ ಹನುಮಪ್ಪನಿಗೆ ಯಾರಿಂದ ಮತ್ತು ಯಾವಾಗ ಸದರಿ 11 ಎಕರೆ 25 ಗುಂಟೆ ಜಮೀನು ಆಗಿದೆ/ಬಂದಿದೆ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 4ನೇ ಪ್ಯಾರಾದಲ್ಲಿ ರಂಗಯ್ಯನ ಮರಣದ ನಂತರ ಆತನ ಮಗನಾದ ಮಲ್ಯಯನಿಗೆ ಸರ್ವೇ ನಂ.91/1 ರಲ್ಲಿ 11 ಎಕರೆ 25 ಗುಂಟೆ ಜಮೀನು ಬಂದಿದೆ ಎಂದು ಬರೆಯಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪು ಹೊಗಿದ್ದರಿಂದ ಆ ರೀತಿ ಬರೆಸಿದ್ದೇನೆ ಎಂದು ನುಡಿಯುತ್ತಾನೆ. ಸದರಿ ವಿಷಯವನ್ನು ನಾನೇ ಬರೆಸಿದ್ದೇನೆ. ಸರ್ವೇ ನಂ.90 ಒಟ್ಟು ವಿಸ್ತೀರ್ಣ 23 ಎಕರೆ ಆಗಿತ್ತು. ಸದರಿ ಸರ್ವೇ ನಂ.90 ರಲ್ಲಿಯ ಜಮೀನುನ್ನು ನನ್ನ ತಾತ ಹನುಮಪ್ಪ, ವಾದಿ ಹನುಮಂತರಾಯನಿಗೆ ಮಾರಾಟ ಮಾಡಿದ್ದಾನೆ. ಸದರಿ ನನ್ನ ತಾತ ಸದರಿ ವಾದಿ ಹನುಮಂತರಾಯನಿಗೆ ಸರ್ವೇ ನಂ.90 ರಲ್ಲಿಯ ಜಮೀನ್ನು ಮಾರಾಟ ಮಾಡಿದ್ದಾನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ಸರ್ವೇ ನಂ.90 ರಲ್ಲಿ ಸರ್ವೇ ನಂ.90/1 ರಲ್ಲಿ 11 ಎಕರೆ 25 ಗುಂಟೆ, ಸರ್ವೇ ನಂ.90/2 ರಲ್ಲಿ 05 ಎಕರೆ 33 ಗುಂಟೆ, ಸರ್ವೇ ನಂ.90/3 ರಲ್ಲಿ 05 ಎಕರೆ 33 ಗುಂಟೆ ಜಮೀನುಗಳು ಮಾತ್ರ ಇವೆ ಎಂದರೆ ಸರಿ. ಸದರಿ ಸರ್ವೇ ನಂ.90/1 ರ 11 ಎಕರೆ 25 ಗುಂಟೆ ಜಮೀನು ಸದರಿ ಮಲಯ್ಯ ತಂದೆ ರಂಗಯ್ಯನ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೇ ನಂ.90 ರಲ್ಲಿಯ ಉಳಿದ 5 ಎಕರೆ 33 ಗುಂಟೆ ಜಮೀನು ನನ್ನ ತಾತ ಸಾಬಗೌಡ, ರಂಗಪ್ಪ, ಬೀಮಷಪ್ಪ ರವರ ಹೆಸರಿಗೆ ಇದೆ ಎಂದರೆ ಸರಿ. ಸರ್ವೇ ನಂ.90 ರಲ್ಲಿಯ ಉಳಿದ 5 ಎಕರೆ 33 ಗುಂಟೆ ಜಮೀನು ವಾದಿ ಹನುಮಂತರಾಯ ಮತ್ತು ಆತನ ಸಹೋದರರಾದ ರಾಮಚಂದ್ರಪ್ಪ ಮತ್ತು ರಂಗಪ್ಪ ರವರ ಹೆಸರಿಗೆ ಇದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ಲೇಖನ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಎಂದು ಒಪ್ಪಿಕೊಂಡಿರುತ್ತಾರೆ. )

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.